# ಆಯುಕ್ತರ ಕಛೇರಿ, ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು

ನಂ.ನಅಪ್ರಾಚಿ : ಚಿಮ : ಚ.ಚ. ಕಾಮಗಾರಿ : ಸಃ : 06 : 2010 - 11. ದಿನಾಂಕ: 10-02-2011.

## :::: ಅಲ್ಪಾವಧಿ ಟೆಂಡರ್ ಪ್ರಕಟಣೆ ::::

1 ಈ ಕೆಳಗೆ ವಿವರಿಸಿರುವ ಯಾವುದಾದರು ಅಥವಾ ಎಲ್ಲಾ ಕಾಮಗಾರಿಗಳಿಗೆ 3 ನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಕ್ರಮ ಸಂಖ್ಯೆ 1 ರಿಂದ 3 ರ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರಿಂದ ಲಕೋಟೆಯನ್ನು ಮೊಹರು ಮಾಡಿ ಸಲ್ಲಿಸತಕ್ಕದ್ದು, **ಇ.ಎಂ.ಡಿ.** ಮತ್ತು ಗುತ್ತಿಗೆದಾರರು ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸುವ ಸಾಮರ್ಥ್ಯದ ಬಗ್ಗೆ ವಿವರಗಳನ್ನು (ಐ.ಟಿ.ಟಿ. ನಿಯಮ 3 ಮತ್ತು 6 ರ ಪ್ರಕಾರ) ಸಲ್ಲಿಸತಕ್ಕದ್ದು, ಮೊಹರು ಮಾಡಿದ ಲಕೋಟೆಯಲ್ಲಿ ಟೆಂಡರ್ ಕಾಮಗಾರಿಯ ದರಗಳ ಪಟ್ಟಿಯನ್ನೊಳಗೊಂಡಿರುತ್ತದೆ. ಲಕೋಟೆಯಲ್ಲಿರುವ ವಿವರಗಳು ಸದರೀ ಕಾಮಗಾರಿಯನ್ನು ನಿರ್ವಹಿಸಲು ಅರ್ಹತೆ ಪಡೆದ ಗುತ್ತಿಗೆದಾರರಿಗೆ ಅಧಿನಿಯಮ 3 ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ.

2 ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರರು ಈ ಕೆಳಗೆ ನಮೂದಿಸಿರುವ ಬೆಲೆಯನ್ನು **ಡಿ.ಡಿ** ರೂಪದಲ್ಲಿ ಯಾವುದಾದರೂ ಸ್ಥಳೀಯ ರಾಷ್ಟ್ರೀಕೃತ / ಶೆಡ್ಯೂಲ್ ಬ್ಯಾಂಕಿನಿಂದ ಪಡೆದ ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು ಇವರಿಗೆ ಪಾವತಿಯಾಗುವಂತೆ ಸಲ್ಲಿಸಿ, ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಲು ದಿನಾಂಕ: 03-03-2011 ಆಗಿರುತ್ತದೆ, ಅರ್ಜಿ ಸಲ್ಲಿಸಿ ವಿವರಗಳುಳ್ಳ ಖಾಲಿ ಟೆಂಡರ್ ಪುಸ್ತಕಗಳನ್ನು ದ್ವಿಪ್ರತಿಯಲ್ಲಿ ಪಡೆಯಲು ದಿನಾಂಕ: 09-03-2011 ರಂದು ಕಛೇರಿಯ ವೇಳೆಯಲ್ಲಿ ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಕಛೇರಿಯಲ್ಲಿ ಪಡೆಯಬಹುದಾಗಿರುತ್ತದೆ.

3 ಟೆಂಡರ್ ಜೊತೆಗೆ ನಿಗದಿತ ಇ.ಎಂ.ಡಿ. ಯನ್ನು ಈ ಕೆಳಗೆ ಅಂಕಣದಲ್ಲಿ ನಮೂದಿಸಿರುವ ಕಾಮಗಾರಿಗೆ ಅನುಗುಣವಾಗಿ ಟೆಂಡರ್‌ನ ಊರ್ಜಿತ ಅವದಿಗಿಂತ 45 ದಿವಸಗಳವರೆಗೆ ಹೆಚ್ಚುವರಿ ಅವಧಿಯನ್ನು ಹೊಂದಿರುವಂತೆ **ಡಿ.ಡಿ.** ರೂಪದಲ್ಲಿ ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು ರವರ ಹೆಸರಿನಲ್ಲಿ ಪಡೆದು ಸಲ್ಲಿಸಬೇಕು.

4 ಮೊಹರಾದ ಟೆಂಡರನ್ನು ದಿನಾಂಕ: 11-03-2011 ರಂದು ಸಂಜೆ **4.00** ಗಂಟೆಗೆ ಮುಂಚಿತವಾಗಿ ಸಲ್ಲಿಸಬೇಕು, ಸ್ವೀಕರಿಸಲಾದ ಟೆಂಡರ್‌ಗಳನ್ನು ಸಾಧ್ಯವಾದರೆ ಅದೇ ದಿನ ಸಂಜೆ 4.30 ರ ನಂತರ ಅಥವಾ ನಂತರದ ದಿನದ ಕಛೇರಿ ಕೆಲಸದ ಸಮಯದಲ್ಲಿ ಹಾಜರಿರುವ ಗುತ್ತಿಗೆದಾರರ ಅಥವಾ ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು. ಇತರೆ ವಿವರಗಳನ್ನು ಟೆಂಡರ್‌ನ (ಕೆ.ಡಬ್ಲ್ಯೂ-1) ನಿಯಮಾವಳಿಯಲ್ಲಿ ನೋಡಿ ತಿಳಿಯಬಹುದಾಗಿದೆ. ಕಾಮಗಾರಿಗಳನ್ನು ಪೂರ್ಣಗೊಳಿಸುವ ಅವಧಿ 1 ತಿಂಗಳು ಮಳೆಗಾಲ ರಹಿತ ನಿಗದಿಪಡಿಸಲಾಗಿದೆ.

5 ಕಾಮಗಾರಿಗೆ ಸಂಬಂದಿಸಿದಂತೆ ಉದ್ದ ಅಗಲಗಳಲ್ಲಿ ವಿಸ್ತೀರ್ಣದಲ್ಲಿ ಮತ್ತು ಮೊತ್ತದಲ್ಲಿ ವ್ಯತ್ಯಾಸಕ್ಕೊಳಪಡುವ ಷರತ್ತಿಗೊಳಪಟ್ಟಿರುತ್ತದೆ. ಹಾಗೂ ಮೇಲೆ ತಿಳಿಸಿರುವಂತೆ ಕಾಮಗಾರಿಯ ಕ್ರಮ ಸಂಖ್ಯೆಯ ವಿವರವನ್ನು ಮತ್ತು ಹೆಚ್ಚಿನ ಮಾಹಿತಿಗಳನ್ನು ಪ್ರಾಧಿಕಾರದ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಪುಟ 2 ಕ್ಕೆ.

ಅಂಕಣ

| ಪ್ಯಾಕೇಜ್ ಸಂ. | ಕಾಮಗಾರಿಯ ಹೆಸರು | ಕಾಮಗಾರಿಯ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಠೇವಣಿ ಮೊತ್ತ ರೂ. ಗಳಲ್ಲಿ | ಖಾಲಿ ಟೆಂಡರ್ ಫಾರಂ ಬೆಲೆ ರೂ. ಗಳಲ್ಲಿ |
|---|---|---|---|---|
| 1 | 2 | 3 | 4 | 5 |
| 1 | ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಹಿರೇಮಗಳೂರು ವಸತಿ ಬಡಾವಣೆಯ ಒಂದನೇ ಹಂತದಲ್ಲಿನ ನಿವೇಶನ ಸಂಖ್ಯೆ. ಒಂದನೇ ಹಂತದಲ್ಲಿನ ನಿವೇಶನ ಸಂಖ್ಯೆ. ಇ-6 ರಿಂದ ಇ-456, ಡಿ-215 ರಿಂದ ಡಿ-214, ಡಿ-214 ರಿಂದ ಡಿ-217, ಡಿ-217 ರಿಂದ ಡಿ-216, ಡಿ-216 ರಿಂದ ಡಿ-215, ಮತ್ತು ಡಿ-216 ರಿಂದ ರಸ್ತೆಯ ಅಂಚಿನವರೆಗೆ ಚಪ್ಪಡಿ ಚರಂಡಿ ನಿರ್ಮಾಣ ಮಾಡುವ ಕಾಮಗಾರಿ. | 3.115 | 7788.00 | 500.00 |
| 2 | ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಹಿರೇಮಗಳೂರು ವಸತಿ ಬಡಾವಣೆಯ ನಾಲ್ಕನೇ ಹಂತದಲ್ಲಿನ ಹಾಳಾಗಿರುವ ಹಳೆಯ ಮೋರಿಗಳನ್ನು ತೆಗೆದು ಹೊಸದಾಗಿ ಆರ್. ಸಿ. ಸಿ. ಡೆಕ್ ಸ್ಲ್ಯಾಬ್ ಮೋರಿ ನಿರ್ಮಾಣ ಮಾಡುವ ಕಾಮಗಾರಿ. | 2.610 | 6525.00 | 500.00 |
| 3 | ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಹಿರೇಮಗಳೂರು ವಸತಿ ಬಡಾವಣೆಯಲ್ಲಿ ಚಪ್ಪಡಿ ಚರಂಡಿ ತೆಗೆದು ರೀಸೆಟ್ಟಿಂಗ್ ಮಾಡಿ ಫ್ಲೋರಿಂಗ್ ಮಾಡುವ ಕಾಮಗಾರಿ ಹಾಗೂ ವಿವಿದ ಹಂತದಲ್ಲಿನ ಅಭಿವೃದ್ಧಿ ಕಾಮಗಾರಿ. | 1.280 | 3200.00 | 500.00 |

ನಿಬಂಧನೆಗಳು :-

1 ಟೆಂಡರ್ ನಿಯಮಾವಳಿಗಳಲ್ಲಿ ಕೇಳಲಾಗಿರುವ ಎಲ್ಲಾ ದಾಖಲೆಗಳನ್ನು ಗುತ್ತಿಗೆದಾರರು ಸಂಪೂರ್ಣವಾಗಿ ನೀಡತಕ್ಕದ್ದು.

2 ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರರು ನಿಗಧಿತ ಅವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.

( ಜೆ. ಜೆ. ಪದ್ಮನಾಭ )
ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

( ಬಿ. ಹೆಚ್. ಶ್ರೀಕಾಂತ್ ಪೈ )
ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.